# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1215 |
| 2 | ಸದಸ್ಯರ ಹೆಸರು | : | ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 29-12-2022 |
| 4 | ಉತ್ತರಿಸುವವರು | : | ಮಾನ್ಯ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ ಜಿಲ್ಲೆ ಉತ್ತರ ತಾಲ್ಲೂಕಿನ ಹೆಣ್ಣೂರು ಗ್ರಾಮದ ಕಸಬಾ ಹೋಬಳಿಯ ಹೆಚ್.ಬಿ.ಆರ್ 5ನೇ ಬ್ಲಾಕ್ ಸರ್ವೆ ನಂ. 100/10 ಮತ್ತು 100/11 ರಲ್ಲಿನ ಅನಧಿಕೃತ ಕಟ್ಟಡವನ್ನು ನೆಲಸಮಗೊಳಿಸಲು ಮಾನ್ಯ ಉಚ್ಚ ನ್ಯಾಯಾಲಯದ ಆದೇಶ ಸಂಖ್ಯೆ: W.P. No 8753 of 2020 (LB-BMP-PIL) ದಿನಾಂಕ: 21-09-2021ರ ಅನ್ವಯ ತೆರವುಗೊಳಿಸಿದ ಕಟ್ಟಡದ ಭಾಗಗಳು ಯಾವುವು: (ವಿವರ ನೀಡುವುದು) | ಮಾನ್ಯ ಉಚ್ಚ ನ್ಯಾಯಾಲಯದ ಆದೇಶ ಸಂಖ್ಯೆ: W.P No. 8753 of 2020 (LB-BMP-PIL) ದಿನಾಂಕ: 21-09-2021ರ ಆದೇಶದಂತೆ ಪ್ರಶ್ನಿತ ಸ್ವತ್ತಿನಲ್ಲಿ ಆರ್.ಸಿ.ಸಿ ಕಂಬಗಳನ್ನು ವ್ಯತಿರಿಕ್ತವಾಗಿ ನಿರ್ಮಿಸಿರುವುದು ಕಂಡುಬಂದಿದ್ದು, ಅವುಗಳನ್ನು ತೆರವುಗೊಳಿಸಲಾಗಿರುತ್ತದೆ. |
| ಆ) | ಬೆಂಗಳೂರು ನಗರ ಜಿಲ್ಲೆ ಉತ್ತರ ತಾಲ್ಲೂಕಿನ ಹೆಣ್ಣೂರು ಗ್ರಾಮದ ಕಸಬಾ ಹೋಬಳಿಯ ಹೆಚ್.ಬಿ.ಆರ್ 5ನೇ ಬ್ಲಾಕ್ ಸರ್ವೆ ನಂ. 100/10 ಮತ್ತು 100/11 ರಲ್ಲಿ ದಿನಾಂಕ:19-01-2022 ರಂದು ಕಟ್ಟಡ ನಿರ್ಮಾಣಕ್ಕೆ ನಕ್ಷೆ ಮಂಜೂರಾಗಿದ್ದಲ್ಲಿ, ಸದರಿ ದಿನಾಂಕಕ್ಕಿಂತ ಮೊದಲು ಈ ಸ್ಥಳದಲ್ಲಿ ಅಸ್ತಿತ್ವದಲ್ಲಿದ್ದ ಕಟ್ಟಡದ ಸ್ಥಿತಿಗತಿಗಳೇನು; ದಿನಾಂಕ:19-01-2022 ರಂದು ಯಾವ ರೀತಿಯ ಕಟ್ಟಡ ನಿರ್ಮಿಸಲು ಅನುಮತಿ ನೀಡಲಾಗಿದೆ: ಅನುಮತಿ ನೀಡಿದ ಕಟ್ಟಡದ ನಕ್ಷೆ ಮತ್ತು ಯಾವ ಉದ್ದೇಶಕ್ಕಾಗಿ ಅನುಮತಿ ನೀಡಲಾಗಿದೆ: (ಸಂಪೂರ್ಣ ವಿವರ ನೀಡುವುದು) | ದಿನಾಂಕ: 19-01-2022 ರಂದು ಈ ಸ್ಥಳದಲ್ಲಿ ವಸತಿ ಕಟ್ಟಡ ನಿರ್ಮಾಣಕ್ಕೆ ಮಂಜೂರಾತಿ ನೀಡಲಾಗಿರುತ್ತದೆ (ಮಂಜೂರಾತಿ ಸಂಖ್ಯೆ: BBMP/PRJ/7037/21-22, ದಿನಾಂಕ: 19-01-2022). ನಕ್ಷೆ ಮಂಜೂರಾತಿಗಿಂತ ಮುಂಚೆ ಸ್ವತ್ತಿನ ಸ್ಥಳದಲ್ಲಿ ಆರ್.ಸಿ.ಸಿ ಕಂಬಗಳನ್ನು ವ್ಯತಿರಿಕ್ತವಾಗಿ ನಿರ್ಮಿಸಿರುವುದು ದಾಖಲೆಗಳಿಂದ ಕಂಡುಬಂದಿರುತ್ತದೆ.<br>ದಿನಾಂಕ: 19-01-2022 ರಲ್ಲಿ ಈ ಸ್ಥಳದಲ್ಲಿ ಏಕ ವಸತಿ ಕಟ್ಟಡ ನಿರ್ಮಿಸಲು ಮಂಜೂರಾತಿ ನಕ್ಷೆಯನ್ನು ನೀಡಲಾಗಿದೆ. |
| ಇ) | ಯಾವುದೋ ಒಂದು ಉದ್ದೇಶಕ್ಕಾಗಿ ಅನುಮತಿ ಪಡೆದು ಬೇರೆ ಯಾವುದೊ ಉದ್ದೇಶಕ್ಕಾಗಿ ಸದರಿ ಕಟ್ಟಡವನ್ನು ಬಳಸಿದ್ದಲ್ಲಿ, ಇಲಾಖೆಯು ಯಾವ ರೀತಿಯ ಕ್ರಮ ಕೈಗೊಂಡಿದೆ: (ವಿವರ ನೀಡುವುದು) | ಒಂದು ಉದ್ದೇಶಕ್ಕಾಗಿ ಅನುಮತಿ ಪಡೆದು ಬೇರೆ ಉದ್ದೇಶಕ್ಕಾಗಿ ಸದರಿ ಕಟ್ಟಡವನ್ನು ಬಳಸಿರುವ ಸಂಬಂಧ ಕೆ.ಎಂ.ಸಿ. ಕಾಯ್ದೆ-2020ರ ಉಪವಿಧಿಗಳ ಪ್ರಕಾರ ನೋಟೀಸ್‌ಗಳನ್ನು ಜಾರಿ ಮಾಡಲಾಗಿರುತ್ತದೆ. ಇದರ ವಿರುದ್ಧವಾಗಿ ಸ್ವತ್ತಿನ ಮಾಲೀಕರು ಮಾನ್ಯ ಮುಖ್ಯ ಆಯುಕ್ತರು ಮತ್ತು ಮೇಲ್ಮನವಿ ಪ್ರಾಧಿಕಾರ ಇಲ್ಲಿ ಅಪೀಲು ಸಂಖ್ಯೆ: 205/2022 ಅನ್ನು ದಾಖಲಿಸಿರುತ್ತಾರೆ. ದಿನಾಂಕ: 17-12-2022 ರಂದು ಈ ಬಗ್ಗೆ ವಿಚಾರಣೆ ನಡೆದು ಮಾನ್ಯ ಮೇಲ್ಮನವಿ ಪ್ರಾಧಿಕಾರದ ಆದೇಶದಂತೆ ದಿನಾಂಕ: 26-12-2022 ರಂದು ಸ್ವತ್ತಿನ ಮಾಲೀಕರ ಹಾಜರಿಯಲ್ಲಿ ಸ್ಥಳ ಮಹಜರ್ ಮಾಡಬೇಕೆಂಬ ಆದೇಶವಿದ್ದು, ಅದರಂತೆ ಸ್ವತ್ತಿನ ಮಾಲೀಕರಿಗೆ ನೋಟೀಸ್ ಜಾರಿಗೊಳಿಸಲಾಗಿರುತ್ತದೆ. |

. . .2.

| | | |
|---|---|---|
| ಈ) | ದಿನಾಂಕ: 26-10-2021 ರಂದು ಸ್ಥಳ ಪರಿಶೀಲನೆಗೊಳ್ಳುವ ಸಮಯದಲ್ಲಿ ಈ ಸ್ಥಳದಲ್ಲಿ ಯಾವ ರೀತಿಯ ಸ್ಥಿತಿಗತಿ ಇತ್ತು? (ಸಂಪೂರ್ಣ ಮಾಹಿತಿಯನ್ನು ನೀಡುವುದು) | ದಿನಾಂಕ: 26-10-2021 ರಂದು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಚ್‌ಬಿಆರ್ ಲೇಔಟ್ ಉಪವಿಭಾಗ, ಇವರು ಸ್ಥಳ ಪರಿಶೀಲನೆ ಮಾಡುವ ಸಮಯದಲ್ಲಿ ಈ ಸ್ಥಳದಲ್ಲಿ ನಿರ್ಮಿಸಲಾಗಿದ್ದ ವ್ಯತಿರಿಕ್ತ ಭಾಗಗಳನ್ನು ಶೇ.100 ರಷ್ಟು ಮಟ್ಟಿಗೆ, ಶ್ರೀ ಲತೀಫ್ ವೇಲ್‌ಫೇರ್ ಟ್ರಸ್ಟ್ ನವರೇ ತೆರವುಗೊಳಿಸಿರುತ್ತಾರೆ. ಆ ಸಮಯದಲ್ಲಿ ಯಾವುದೇ ನಿರ್ಮಾಣ ಕಾರ್ಯವು ನಡೆಯುತ್ತಿರುವುದು ಕಂಡುಬಂದಿರುವುದಿಲ್ಲ. |

**ನಅಇ 577 ಎಂಎನ್‌ಯು 2022**

**(ಬಸವರಾಜ ಬೊಮ್ಮಾಯಿ)**
ಮುಖ್ಯಮಂತ್ರಿ